ಕಾರ್ಯಸೂಚಿ ಸಂಖ್ಯೆ: ಅಭಿವೃದ್ಧಿ. ಶಾ.ಸ. ೩!-28-(2016)

ವಿಷಯ: ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕರುಗಳಿಗೆ ಕಿರು ಸಂಶೋಧನಾ ಪ್ರಸ್ತಾವನೆ ಮಂಜೂರು ಮಾಡುವ ಬಗ್ಗೆ.

* * *

ವಿಶ್ವವಿದ್ಯಾನಿಲಯ ಅನುದಾನ ಆಯೋಗದ ಹನ್ನೆರಡನೇ ಯೋಜನೆಯ ಮಾರ್ಗಸೂಚಿಗಳ ಪ್ರಕಾರ ವಿಶ್ವವಿದ್ಯಾನಿಲಯದ ಶಿಕ್ಷಕರುಗಳ ಕಿರು ಸಂಶೋಧನಾ ಪ್ರಸ್ತಾವನೆಗಳಿಗೆ ಆಯಾಯ ವಿಶ್ವವಿದ್ಯಾನಿಲಯಗಳು ಅಭಿವೃದ್ಧಿ ಅನುದಾನದಿಂದ (Development Grant) ಅನುದಾನ ಮಂಜೂರು ಮಾಡಬೇಕಾಗಿರುತ್ತದೆ. ಅನುದಾನ ಮಂಜೂರಾತಿ ಕೋರಿ ಶಿಕ್ಷಕರುಗಳು ಸಲ್ಲಿಸುವ ಕಿರು ಸಂಶೋಧನಾ ಪ್ರಸ್ತಾವನೆಗಳನ್ನು ತಜ್ಞರ ಸಮಿತಿಯ ಪರಿಶೀಲನೆಗೆ ಮಂಡಿಸಿ ಸದರಿ ಸಮಿತಿಯ ಅಭಿಪ್ರಾಯದಂತೆ ಸಂಶೋಧನಾ ಪ್ರಸ್ತಾವನೆ ಮಂಜೂರಾತಿ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ.

ಅದರಂತೆ ವಿವಿಧ ಸ್ನಾತಕೋತ್ತರ ವಿಭಾಗಗಳ ಸಹಾಯಕ ಪ್ರಾಧ್ಯಾಪಕರುಗಳಿಂದ ಕಿರು ಸಂಶೋಧನಾ ಪ್ರಸ್ತಾವನೆಯನ್ನು ಈ ಕಚೇರಿ ಅಧಿಸೂಚನೆ ದಿನಾಂಕ: 16.10.2015 ರಲ್ಲಿ ಆಹ್ವಾನಿಸಲಾಗಿದ್ದು ಸ್ವೀಕೃತಿಗೊಂಡ ಪ್ರಸ್ತಾವನೆಗಳನ್ನು ಪರಿಶೀಲಿಸುವ ಪ್ರಯುಕ್ತ ಈ ಕೆಳಗಿನಂತೆ ತಜ್ಞರ ಸಮಿತಿಯನ್ನು ರಚಿಸಲಾಗಿರುತ್ತದೆ.

1.	ಪ್ರೊ. ಜಯಗೋಪಾಲ್ ಉಚ್ಚಿಲ್ ನಿವೃತ್ತ ಪ್ರಾಧ್ಯಾಪಕರು ಹಾಗೂ ನಿರ್ದೇಶಕರು ಜೈನ್ ವಿಶ್ವವಿದ್ಯಾನಿಲಯ, ಬೆಂಗಳೂರು.	ಅಧ್ಯಕ್ಷರು
2.	ಪ್ರೊ. ಸಿ. ರಂಗನಾಥಯ್ಯ ನಿವೃತ್ತ ಪ್ರಾಧ್ಯಾಪಕರು, ಮೈಸೂರು ವಿ. ವಿ.	ಸದಸ್ಯರು
3.	ಪ್ರೊ. ಎಚ್. ಶಿವಾನಂದ ಮೂರ್ತಿ ಮುಖ್ಯಸ್ಥರು, Dept. of Aquaculture ಮೀನುಗಾರಿಕಾ ಮಹಾವಿದ್ಯಾಲಯ, ಮಂಗಳೂರು	ಸದಸ್ಯರು
4.	ಪ್ರೊ. ಕೆ. ರಮೇಶ್ ಕಾರ್ಣಿಕ್ Former Director, Justice K. S. Hegde Institute of Management, Udupi District, Karkala, Nitte 574 110.	ಸದಸ್ಯರು
5.	ಪ್ರೊ. ಬಿ. ಸುರೇಂದ್ರ ರಾವ್ ನಿವೃತ್ತ ಇತಿಹಾಸ ಪ್ರಾಧ್ಯಾಪಕರು, ಅಸೈಗೋಳಿ.	ಸದಸ್ಯರು
6.	ಡಾ. ನಾ. ಮೊಗಸಾಲೆ, ಕಾಂತಾವರ, ಉಡುಪಿ	ಸದಸ್ಯರು
7.	ಡಾ. ಬಿ. ಹೆಚ್. ಶೇಖರ್, ವಿಶೇಷಾಧಿಕಾರಿ (ಆಡಳಿತ)	ಸಂಯೋಜಕರು

ಮೇಲಿನ ಸಮಿತಿಯು ದಿನಾಂಕ: 18.02.2016 ರಂದು ಸಭೆ ನಡೆಸಿ ಕಿರು ಸಂಶೋಧನಾ ಪ್ರಸ್ತಾವನೆಗಳನ್ನು ಪರಿಶೀಲಿಸಿರುತ್ತದೆ. ಸದರಿ ಸಮಿತಿಯ ಸಭಾ ನಡವಳಿಯನ್ನು ಅನುಬಂಧ "ಅ" ದಲ್ಲಿ ಅವಗಾಹನೆಗೆ ಮಂಡಿಸಲಾಗಿದೆ.

ಸಹಾಯಕ ಪ್ರಾಧ್ಯಾಪಕರುಗಳಿಗೆ ಕಿರು ಸಂಶೋಧನಾ ಪ್ರಸ್ತಾವನೆಗಳ ಮಂಜೂರಾತಿ ವೆಚ್ಚವನ್ನು 2015-16ನೇ ಸಾಲಿನ ಆಯವ್ಯಯ ಅಂದಾಜು ಲೆಕ್ಕ ಶೀರ್ಷಿಕೆ "1440 – ಸಂಶೋಧನಾ ಅನುದಾನ ಮತ್ತು ವಿ. ವಿ. ಫೆಲೋಶಿಪ್" ರಲ್ಲಿ ಭರಿಸಲು ಪ್ರಸ್ತಾವಿಸಲಾಗಿದೆ.

ಆದುದರಿಂದ ಘಟಕ ಕಾಲೇಜುಗಳೂ ಸೇರಿದಂತೆ ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕರು ಮತ್ತು ಸತತ ಹತ್ತು ವರ್ಷಕ್ಕಿಂತ ಹೆಚ್ಚು ಅವಧಿಗೆ ಸೇವೆ ಸಲ್ಲಿಸುತ್ತಿರುವ ಪಿ.ಎಚ್‌ಡಿ. ಹೊಂದಿರುವ ಅತಿಥಿ ಉಪನ್ಯಾಸಕರುಗಳಿಗೆ ಕಿರು ಸಂಶೋಧನಾ ಪ್ರಸ್ತಾವನೆ ಮಂಜೂರಾತಿ ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಸೆಕ್ಷನ್ 29(2)(ಎ)ರ ಅವಕಾಶದಂತೆ ಸಿಂಡಿಕೇಟ್ ಸಭೆಯ ಪರಿಗಣನೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

Registrar
MANGALORE UNIVERSITY
MANGALAGANGOTRI - 574 199

P50

ಕಾರ್ಯಸೂಚಿ ಸಂಖ್ಯೆ: ಡಿಇವಿ ಸಾಸ.2:28(2016)

ವಿಷಯ: ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕರುಗಳಿಗೆ ಕಿರು ಸಂಶೋಧನಾ ಪ್ರಸ್ತಾವನೆ ಮಂಜೂರು ಮಾಡುವ ಬಗ್ಗೆ.

ಸಭೆಯ ದಿನಾಂಕ: 10.03.2016

ನಿರ್ಣಯ: ಸದರಿ ವಿಷಯದ ಬಗ್ಗೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸಲಾಯಿತು.

ಉಪಕುಲಸಚಿವರು (ಪರೀಕ್ಷಾ)
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ - 574 199 ದ.ಕ.

Registrar
MANGALORE UNIVERSITY
MANGALAGANGOTRI - 574 199